# ಶ್ರೇಷ್ಠ ಯುವ ಕೃಷಿ ಮಹಿಳೆ




ಶ್ರೀಮತಿ ಸುನಿತಾ ಚನ್ನಪ್ಪ ಬಣಕಾರ

ಸಾ : ಜೋಯಿಸರಹಳ್ಳಿ

ತಾ : ರಾಣೆಬೆನ್ನೂರು

ಜಿ : ಹಾವೇರಿ

☎:


## ವಿಶೇಷ ಸಾಧನೆಗಳು

ಆರ್ಥಿಕವಾಗಿ ಉತ್ತಮವಿರುವ ಸಂದರ್ಭಗಳಲ್ಲಿ ಕೃಷಿ ಕುಟುಂಬದ ಹೆಣ್ಣು ಮಕ್ಕಳು ಹೊಲಗಳಿಗೆ ಹೋಗಿ ಕೆಲಸ ಮಾಡುವುದೇ ವಿರಳ. ಆದರೆ ಇಂತಹ ಸಂದರ್ಭಗಳಲ್ಲಿಯೂ ಶ್ರೀಮತಿ ಸುನೀತಾ ಚನ್ನಪ್ಪ ಬಣಕಾರ ಇವರು ಕೃಷಿಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡಿದ್ದಾರೆ. ತಮ್ಮ 22 ಎಕರೆ ಒಣಬೇಸಾಯದಲ್ಲಿ ಬೆಳೆ ಪರಿವರ್ತನೆ, ನೂತನ ತಳಿಗಳ ಬಳಕೆ ಹಾಗೂ ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಉತ್ತಮ ಇಳುವರಿ ಪಡೆಯುತ್ತಿದ್ದಾರೆ. ಕೃಷಿ ತಂತ್ರಜ್ಞಾನ ಬಳಕೆ ಬಗ್ಗೆ ಕುಟುಂಬದ ಸದಸ್ಯರ ಸಲಹೆ ಪಡೆಯುವ ಇವರು ಸಿರಿ ಧಾನ್ಯಗಳ ಬಳಕೆ ಹಾಗೂ ಸಂಸ್ಕರಣೆ ಬಗ್ಗೆ ಹೆಚ್ಚಿನ ಒಲವು ಹೊಂದಿದ್ದಾರೆ. ಇನ್‌ಸಿಂಪ್ ಕಾರ್ಯಕ್ರಮದ ಅಡಿ ಪಡೆದ ಯಂತ್ರೋಪಕರಣಗಳ ಸಹಾಯದಿಂದ ಸಿರಿಧ್ಯಾನ್ಯಗಳನ್ನು ಖರೀದಿಸಿ, ಸಂಸ್ಕರಿಸಿ ಅಕ್ಕಿಯ ರೂಪದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಿಗೆ ಕಳಿಸುವುದರ ಮೂಲಕ ಉತ್ತಮ ಮಾರುಕಟ್ಟೆ ಸಂಪರ್ಕ ಜಾಲ ಸಹ ಬೆಳೆಸಿಕೊಂಡಿದ್ದಾರೆ. ಮನೆಗೆ ಬೇಕಾದ ತರಕಾರಿಗಳನ್ನು ಹಿತ್ತಲಿನಲ್ಲಿ ಬೆಳೆದುಕೊಳ್ಳುವ ಇವರು ಉತ್ತಮವಾಗಿ ಗೊಬ್ಬರದ ಗುಂಡಿಗಳನ್ನು ಸಹ ನಿರ್ಮಿಸಿಕೊಂಡಿದ್ದಾರೆ.





